

# ರವಿಕಿರಣ್; ‘ಸಂಗೀತ ಕಲಾನಿಧಿ’

ಚಿತ್ರವೀಣಾ ವಾದನದಲ್ಲಿ ವಿಶ್ವಮಾನ್ಯತೆ ಪಡೆದಿರುವ ಎನ್. ರವಿಕಿರಣ್, ‘ಭಾರತೀಯ ಸಂಗೀತದ ಮೊಜಾರ್ಟ್‘ ಎಂಬ ಪ್ರಶಂಸೆ ಗಳಿಸಿರುವ ಅಪರೂಪದ ಕಲಾವಿದ. ಈ ಸಾಧಕರಿಗೆ ಇದೀಗ ಮದ್ರಾಸ್ ಮ್ಯೂಸಿಕ್ ಅಕಾಡೆಮಿ ನೀಡುವ ‘ಸಂಗೀತ ಕಲಾನಿಧಿ’ ಪುರಸ್ಕಾರ.

■ ಉಮಾ ಅನಂತ್

ಚಿತ್ರವೀಣೆಯ ನುಡಿಸಾಣಿಕೆ ಮೂಲಕ ದೇಶ ವಿದೇಶಗಳಲ್ಲಿ ಖ್ಯಾತಿ ಗಳಿಸಿದ ವಿದ್ವಾನ್ ರವಿಕಿರಣ್ ಸಂಗೀತ ಕ್ಷೇತ್ರದಲ್ಲಿ ಹಲವು ವಿಶೇಷಣಗಳಿಗೆ ಪಾತ್ರರಾದವರು. ಸಂಗೀತ ಮನೆತನದಲ್ಲೇ ಹುಟ್ಟಿ ಆ ಪರಂಪರೆಯನ್ನು ಮುನ್ನಡೆಸಿಕೊಂಡು ಹೋಗುತ್ತಿರುವ ರವಿಕಿರಣ್ ತನ್ನ ಎರಡನೇ ವಯಸ್ಸಿನಿಂದಲೇ ಸಂಗೀತದೊಂದಿಗೆ ಬಾಂಧವ್ಯ ಬೆಳೆಸಿಕೊಂಡು ವಿವಿಧ ಹಂತಗಳಲ್ಲಿ ಯಶಸ್ಸಿನ ಮೆಟ್ಟಿಲೇರುತ್ತಾ ಬಂದಿದ್ದಾರೆ. ಇದೀಗ ಇವರಿಗೆ ಮದ್ರಾಸ್ ಮ್ಯೂಸಿಕ್ ಅಕಾಡೆಮಿ ನೀಡುವ ಪ್ರತಿಷ್ಠಿತ ‘ಸಂಗೀತ ಕಲಾನಿಧಿ’ ಪ್ರಶಸ್ತಿ ಒಲಿದಿದೆ.

ತನ್ನ ತಂದೆ ಚಿತ್ರವೀಣಾ ನರಸಿಂಹನ್ ಅವರಲ್ಲಿ ಸಂಗೀತ ಕಲಿಕೆ ಆರಂಭಿಸಿದ ರವಿಕಿರಣ್, ಮುಂದೆ ಪುಟವಿಕ್ಕಿದ ಚಿನ್ನದಂತೆ ಹೊಳೆದದ್ದು ಸಂಗೀತಗಾರರ ಸಂಗೀತಗಾರ್ತಿ ಎಂಬ ಮನ್ನಣೆ ಗಳಿಸಿದ್ದ ವಿದುಷಿ ಟಿ. ಬೃಂದಾ ಅವರ ಮಾರ್ಗದರ್ಶನದಲ್ಲಿ. ಮೆಲ್ ಹಾರ್ಮನಿ, ಟೆಲಿ ಟೀಚಿಂಗ್ ಸೇರಿ ಹಲವು ಪ್ರಥಮ ಪ್ರಯೋಗಗಳನ್ನು